# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಭಾರತೀಯ ಹವಾಮಾನ ಇಲಾಖೆ

ಗ್ರಾಮೀಣ ಕೃಷಿ ಹವಾಮಾನ ಸೇವಾ
ಕೃಷಿ ಹವಾಮಾನ ಕ್ಷೇತ್ರ ವಿಭಾಗ(IMD)
ನಾಗನಹಳ್ಳಿ, ಮೈಸೂರು 570 003

ದಿನಾಂಕ: 20-02-2024

## ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮಂಡ್ಯ ಜಿಲ್ಲೆಯ ಹವಾಮಾನ ಮತ್ತು ಕೃಷಿ ಕಾರ್ಯಕ್ರಮಗಳ ವರದಿ ಪತ್ರಿಕೆ

**ಹವಾಮಾನದ ಮುನ್ಸೂಚನೆ (21–02–2024 ರಿಂದ 25–02–2024)**

| Parameters | 21.02.2024 | 22.02.2024 | 23.02.2024 | 24.02.2024 | 25.02.2024 |
|---|---|---|---|---|---|
| ಮಳೆ (ಮಿ.ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ ($^0$ಸೆ) | 34 | 33 | 33 | 33 | 33 |
| ಕನಿಷ್ಠ ಉಷ್ಣಾಂಶ ($^0$ಸೆ) | 17 | 17 | 18 | 18 | 18 |
| ಮೋಡ (ಆಕ್ಟ್‌ಸ್) | 2 | 2 | 2 | 2 | 2 |
| ಗರಿಷ್ಠ ಗಾಳಿಯ ತೇವಾಂಶ (%) | 75 | 75 | 75 | 74 | 58 |
| ಕನಿಷ್ಠ ಗಾಳಿಯ ತೇವಾಂಶ (%) | 29 | 29 | 29 | 27 | 27 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 2 | 2 | 1 | 3 | 2 |
| ಗಾಳಿಯ ದಿಕ್ಕು( ಡಿಗ್ರಿ) | 150 | 236 | 252 | 246 | 225 |

**ಮುನ್ಸೂಚನೆಯ ಸಾರಾಂಶ**

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಈ ವಾರದ ಮುನ್ಸೂಚನೆ ಮಂಡ್ಯ ಜಿಲ್ಲೆಯಲ್ಲಿ ದಿನಾಂಕ: 21–02–2024 ರಿಂದ 25–02–2024 ವರೆಗೆ ಮೋಡ ಕವಿದ ವಾತಾವರಣವಿದ್ದು, ಮಳೆ ಬರುವ ಸಂಭವವಿಲ್ಲ. ಗರಿಷ್ಠ ಉಷ್ಣಾಂಶ 33–34 °C. ಮತ್ತು ಕನಿಷ್ಠ ಉಷ್ಣಾಂಶ 17–18°C ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇಕಡ 58–75% ವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇಕಡ 27–29% ವರೆಗೆ ಮತ್ತು ಗಾಳಿಯು ಗಂಟೆಗೆ 1–3 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

**ಕೃಷಿ ಚಟುವಟಿಕೆಗಳ ಬಗ್ಗೆ ಅನುಸರಿಸಬಹುದಾದ ವಿವರ:**

| ಬೆಳೆ/ ಜಾನುವಾರಗಳು | ರೋಗ ಮತ್ತು ಕೀಟ | ಹಾನಿ ಲಕ್ಷಣಗಳು | ಕೃಷಿ ಸಲಹೆಗಳು |
|---|---|---|---|
| • ಮುಂದಿನ 4–5 ದಿನಗಳಲ್ಲಿ ಒಣಹವೆ ಮುಂದುವರಿಯುವ ಸಾಧ್ಯತೆ ಇರುವುದರಿಂದ ರೈತರು ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ನೀರನ್ನು ಹಾಯಿಸುವುದು ಸೂಕ್ತ.<br>• ಬೆಳೆಗಳ ಉಳಿಕೆ ಅಥವಾ ಗೊಬ್ಬರದ ಗಿಡಗಳನ್ನು ಭೂ ಹೊದಿಕೆಯಾಗಿ ಬೆಳೆಗಳಿಕೆ ಹಾಕುವುದರಿಂದ ಮಣ್ಣಿನ ತೇವಾಂಶವನ್ನು ಕಾಪಾಡಿಕೊಳ್ಳಬಹುದು | | | |
| ತೆಂಗು | ಗರಿತಿನ್ನುವ ಕಪ್ಪು ತಲೆ ಕಂಬಳಿ ಹುಳು | ಮರಿ ಹುಳುಗಳು ಗರಿಗಳ ತಳಭಾಗದಲ್ಲಿದ್ದು ಗರಿಗಳನ್ನು ಕೆರೆದು ತಿನ್ನುತ್ತವೆ.<br>ಮರಿ ಹುಳುಗಳು ರೇಷ್ಮೆಯಂತೆ ಜಾಡಿನ ಬಲೆಯಲ್ಲಿರುತ್ತವೆ.<br>ರೇಷ್ಮೆ ಜಾಡಿನಲ್ಲಿ ಮರಿ ಹುಳುಗಳ ಹಿಕ್ಕೆಗಳು ಇದ್ದು ಬಾದೆಗೊಳಗಾದ ಗರಿಗಳು/ತೋಟಗಳು ಬೆಂಕಿಯಿಂದ ಸುಟ್ಟಂತೆ ಕಾಣುತ್ತದೆ.<br>ಪೀಡೆ ಬಾಧೆ ತೀವ್ರತೆಯಾದಲ್ಲಿ ಸಾಮೂಹಿಕವಾಗಿ ಮಾನೋಕ್ರೋಟೋಫಾಸ್ 36 ಎಸ್. ಎಲ್ ಕೀಟನಾಶಕವನ್ನು ಬೇರಿನ ಮೂಲಕ ಮರಗಳಿಗೆ ಉಣಿಸಬೇಕು. | |

| | | |
|---|---|---|
| | | ವಿಧಾನ : ಮರದಿಂದ ಒಂದು ಮೀಟರ್ ಅಂತರದಲ್ಲಿ ಒಂದು ಬಲಿತ ಪೆನ್ಸಿಲ್ ಗಾತ್ರದ ಕಂದು ಬಣ್ಣದ ಬೇರನ್ನು ಅಗೆದು ತೆಗೆದು ಅದರ ತುದಿಯನ್ನು ಓರೆಯಾಗಿ ಕತ್ತರಿಸಿ, ನಾಲ್ಕು ಸೆಂ. ಮೀ. ಅಗಲ 15 ಸೆಂ. ಮೀ. ಉದ್ದದ ಪ್ಲಾಸ್ಟಿಕ್ ಚೀಲದಲ್ಲಿ 7.5 ರಿಂದ 10 ಮಿ. ಲೀ ಮಾನೋಕ್ರೋಟೋಫಾಸ್ 36 ಎಸ್. ಎಲ್ ಗೆ ಅಷ್ಟೇ ಪ್ರಮಾಣದ ನೀರನ್ನು ಸೇರಿಸಿ ತಯಾರಿಸಿದ ದ್ರಾವಣದಲ್ಲಿ ಕತ್ತರಿಸಿದ ಬೇರಿನ ಭಾಗವನ್ನು ಮುಳುಗುವಂತೆ ಊರಿ, ಪ್ಲಾಸ್ಟಿಕ್ ಚೀಲದ ಬಾಯನ್ನು ದಾರದಿಂದ ಕಟ್ಟಬೇಕು.<br>ಈ ರೀತಿಯಲ್ಲಿ ಮಾಡಿದ 24 ಗಂಟೆಗಳಲ್ಲಿ ಬೇರಿನ ಮೂಲಕ ಕೀಟನಾಶಕವನ್ನು ಮರ ಹೀರಿಕೊಳ್ಳುತ್ತದೆ. ಹೀರಿಕೊಳ್ಳದಿದ್ದರೆ 48 ಗಂಟೆಗಳ ನಂತರ ಬೇರೆ ಬೇರಿನಿಂದ ಕೀಟನಾಶಕವನ್ನು ಉಣಿಸಬೇಕಾಗುತ್ತದೆ. ಕೀಟನಾಶಕ ಬಳಸಿದ 30 ದಿನಗಳವರೆಗೂ ಎಳನೀರು/ಕಾಯಿಗಳನ್ನು ಬಳಸಬಾರದು. |
| ಅಲಸಂದೆ | ಸಸ್ಯಹೇನು | ನೂರಾರು ಸಸ್ಯಹೇನುಗಳು ಸುಳಿ, ಎಲೆ, ಹೂ, ಮೊಗ್ಗು, ಕಾಯಿಗಳಿಂದ ರಸ ಹೀರುತ್ತಿರುತ್ತವೆ. ಎಲೆಗಳು ಮುದುಡುವುದು, ಕಾಯಿಗಳಲ್ಲಿನ ಬೀಜ ಚೀಕಲಾಗುವುದು. ಕೆಳಗಿನ ಎಲೆಗಳಲ್ಲಿ ಕಪ್ಪು ಬೂಷ್ಟು ಬೆಳೆಯುವುದು. ಕೀಟ ಬಾದೆ ಕಾಣಿಸಿಕೊಂಡಾಗ ಲೀ. ನೀರಿಗೆ 1.7 ಮಿ.ಲೀ.ಡೈಮಿಥೋಯೇಟ್ 30 ಇಸಿ. ಸೇರಿಸಿ ಸಿಂಪಡಿಸುವುದು. ಎಕರೆಗೆ 200 ಲೀ. ಸಿಂಪರಣಾ ದ್ರಾವಣವನ್ನು ಬೇಕಾಗುತ್ತದೆ. |
| ಮಾವು | ಬೂದಿರೋಗ ಹಾಗೂ ಜಿಗಿಹುಳು (ಜಾಸಿಡ್ಸ್) | • ವಾತಾವರಣದಲ್ಲಿ ಬೆಳಗಿನ ಸಮಯದಲ್ಲಿ ಕಡಿಮೆ ಉಷ್ಣಾಂಶ ಮತ್ತು ಹೆಚ್ಚಿನ ಆರ್ದ್ರತೆ ಇರುವುದರಿಂದ ಹೂ ಬಿಡುವ ಹಂತದಲ್ಲಿ ಬೂದಿರೋಗದ ಹಾಗೂ ಜಿಗಿಹುಳು ಭಾದೆ ಕಂಡು ಬರುತ್ತದೆ. ಬೂದಿರೋಗದ ನಿಯಂತ್ರಣಕ್ಕಾಗಿ ಹೂ ಬಿಡುವ ಮತ್ತು ಕಾಯಿ ಕಚ್ಚಿದ ಹಂತದಲ್ಲಿ ಲೀ. ನೀರಿಗೆ 3.0 ಗ್ರಾಂ. ನೀರಿನಲ್ಲಿ ಕರಗುವ ಗಂಧಕದ ಪುಡಿ ಅಥವಾ 1.0 ಮಿಲೀ. ಹೆಕ್ಸಾಕೋನೋಜೋಲ್ 5 ಇಸಿ. ಔಷದವನ್ನು ಬೆರಸಿ ಸಿಂಪಡಿಸಬೇಕು.<br>• ಜಿಗಿ ಹುಳು ಕೀಟದ ನಿಯಂತ್ರಣಕ್ಕೆ ಹೂವು ಬಿಡುವ ಮುಂಚೆ ಮತ್ತು ಕಾಯಿಗಳು ಬಟಾಣಿ ಕಾಳಿನ ಗಾತ್ರದಲ್ಲಿದ್ದಾಗ ಲೀ. ನೀರಿಗೆ 0.3 ಮಿಲೀ ಇಮಿಡಾಕ್ಲೋಪ್ರಿಡ್ 17.8 ಎಸ್.ಎಲ್. ಬೆರೆಸಿ ಸಿಂಪಡಿಸುವುದು. |
| ಅವರೆ | ಕಾಯಿ ಕೊರಕ | • ಗಿಡ ಹೂವಾಡುವ ಹಂತದಲ್ಲಿ 5 ಮಿ.ಲೀ. ಬೇವಿನ ಎಣ್ಣೆಯನ್ನು ಪ್ರತಿ ಲೀಟರ್ ನೀರಿನೊಂದಿಗೆ ಬೆರೆಸಿ ಸಿಂಪರಣೆ ಮಾಡಬೇಕು.<br>• ಎಕರೆಗೆ 5 ರಂತೆ ಮೋಹಕ ಬಲೆಗಳನ್ನು ಹಾಕಬೇಕು.<br>• ಕಾಯಿ ಕೊರಕದ ಬಾಧೆಕಂಡು ಬಂದಾಗಕ್ವಿನಾಲ್‌ಫಾಸ್ 25 ಇ.ಸಿ ಅನ್ನು 2 ಮಿ.ಲೀ. ಪ್ರತಿ ಲೀಟರ್ ನೀರಿಗೆಅಥವಾ ಫೆನ್ವಲರೇಟ್ 20 ಇ.ಸಿ ಅನ್ನು 3 ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. |
| ಕುಂಬಳಕಾಯಿ ಮತ್ತು ಸೌತೆಕಾಯಿ | ಬೂಜು ರೋಗ ಹಾಗೂ ಬೂದಿ ರೋಗ | ಬೂಜು ರೋಗ: ಮೊದಲಿಗೆ ಕೋನಾಕಾರದ ಹಳದಿ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಅನಂತರ ಅವು ಒಂದಕ್ಕೊಂದು ಸೇರಿಕೊಂಡು, ಎಲೆಗಳು ಒಣಗುತ್ತವೆ. ಮೆಟಲಾಕ್ಸಿಲ್+ಮ್ಯಾಂಕೋಜೆಬ್@ 2 ಗ್ರಾಂ/ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.<br>ಬೂದಿ ರೋಗ: ಮೊದಲಿಗೆ ಸೂಕ್ಷ್ಮಗಾತ್ರದ, ಬಿಳಿ ಬೂದು ಬಣ್ಣದ ಚುಕ್ಕೆಗಳು ಎಲೆ ಮತ್ತು ಕಾಂಡಗಳ ಮೇಲೆ ಕಾಣಿಸುತ್ತವೆ. ರೋಗದ ತೀವ್ರತೆ ಹೆಚ್ಚಾದಾಗ ಎಲೆಗಳು ಪೂರ್ತಿ ಒಣಗುತ್ತವೆ. ಕಾರ್ಬೆಂಡಜಿಂ@ 1 ಗ್ರಾಂ/ಲೀ. ನೀರಿಗೆ, (180 ಗ್ರಾಂ/ಎಕರೆಗೆ.) ಅಥವಾ ಡೈನೊಕಾಪ್ 1.5 ಗ್ರಾಂ/ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.<br>ಪ್ರತಿ ಎಕರೆಗೆ 200 ಲೀಟರ್ ಸಿಂಪರಣಾ ದ್ರಾವಣವನ್ನು ಬೇಕಾಗುತ್ತದೆ. 2 ವಾರಗಳ ಅಂತರದಲ್ಲಿ ತಿಳಿಸಿದ ಶಿಲೀಂಧ್ರ ನಾಶಕದ ದ್ರಾವಣದಿಂದ ಮೂರು ಸಾರಿ ಸಿಂಪಡಿಸಬೇಕು. |
| ಕಬ್ಬು | ತರಗು ನಿರ್ವಹಣೆ | ಕಬ್ಬು ಕಟಾವು ಮುಗಿದ ಮೇಲೆ ಗರಿ ಅಥವಾ ತರಗನ್ನು ಜಮೀನಿನಲ್ಲೆ ಪರ್ಯಾಯ ಸಾಲುಗಳಲ್ಲಿ ಹರಡಿ ನೀರು ಹಾಯಿಸಿ, ಎಕರೆಗೆ 15 ಕಿ. ಗ್ರಾಂ ಯೂರಿಯವನ್ನು ಬೆರಸಿದ ಶೇ. 5ರ ಸಗಣಿ ಬಗ್ಗಡವನ್ನು ಚಿಮುಕಿಸುವುದು.<br>ಪ್ಲೋರೋಟಸ್ ಸೂಕ್ಷ್ಮಾಣು ಜೀವಿಯನ್ನು ಎಕರೆಗೆ 4 ಕಿ. ಗ್ರಾಂ ಪ್ರಮಾಣದಲ್ಲಿ ಅಥವಾ ಎಕರೆಗೆ 1– 1.5 ಟನ್ ಸಕ್ಕರೆ ಕಾರ್ಖಾನೆ ಮಡ್ಡಿಗೊಬ್ಬರ ಹರಡುವುದರಿಂದ ತರಗನ್ನು ತ್ವರಿತವಾಗಿ ಕಳೆಯಿಸಬಹುದು. |

| | |
|---|---|
| ಜಾನುವಾರು | • ನವಜಾತ ಕರುಗಳನ್ನು ಶೀತದಿಂದ ರಕ್ಷಿಸಲು, ಎಳೆಯ ಕರುಗಳಿಗೆ ಒಣ ಹುಲ್ಲಿನ/ಹುಲ್ಲು ಹಾಸಿಗೆಯನ್ನು ಒದಗಿಸಿ, ಹಾಸಿಗೆಯ ಸಾಮಗ್ರಿಯನ್ನು ಒಣಗಿಸಿ ಮತ್ತು ನಿಯಮಿತವಾಗಿ ಬದಲಿಸಿ. ಮಧ್ಯಾಹ್ನದ ಸಮಯದಲ್ಲಿ ಪ್ರಾಣಿಗಳನ್ನು ಸೂರ್ಯನ ಬೆಳಕಿಗೆ ಒಡ್ಡಿ. ರಾತ್ರಿಯ ತಾಪಮಾನದಲ್ಲಿ ಕುಸಿತದ ಸಾಧ್ಯತೆಯು ಪ್ರಾಣಿಗಳನ್ನು ಶೆಡ್‌ಅಡಿಯಲ್ಲಿ ಇರಿಸಿ ಮತ್ತು ದನದ ಕೊಟ್ಟಿಗೆಯಲ್ಲಿ ನೊಣ ಮತ್ತು ಸೊಳ್ಳೆಗಳನ್ನು ನಿಯಂತ್ರಿಸಲು ಸುತ್ತಲೂ ಸ್ವಚ್ಛಗೊಳಿಸುತ್ತದೆ.<br>• ಮುಂಜಾನೆ ಮತ್ತು ಸಂಜೆ ಸಮಯದಲ್ಲಿ 50–100 ಗ್ರಾಂ ಖನಿಜ ಮಿಶ್ರಣದ ಜೊತೆಗೆ ಗುಣಮಟ್ಟದ ಮೇವುಗಳೊಂದಿಗೆ ಪ್ರಾಣಿಗಳಿಗೆ ಆಹಾರವನ್ನು ನೀಡಿ. ಇದು ಹಾಲಿನ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ ಮತ್ತು ಪ್ರಾಣಿಗಳ ರೋಗ ನಿರೋಧಕಶಕ್ತಿಯನ್ನು ಹೆಚ್ಚಿಸುತ್ತದೆ. ಹಾಲುಣಿಸುವ ಪ್ರಾಣಿಗಳಲ್ಲಿ ಹಾಲಿನ ಜ್ವರ ಸಂಭವಿಸುವುದನ್ನು ತಪ್ಪಿಸಲು, ರೈತರು ಬಾಯಿಯಿಂದ ಸುಲಭವಾಗಿ ಹೀರಿಕೊಳ್ಳುವ ಕ್ಯಾಲ್ಸಿಯಂ ಪೂರಕಗಳನ್ನು ತಿನ್ನಲು ಸಲಹೆ ನೀಡುತ್ತಾರೆ.<br>• ಹೆಚ್ಚಿನ ಆರ್ದ್ರತೆಯಿಂದಾಗಿ ರೈತರಿಗೆ ಮನೆ ನೊಣ/ಇತರ ಹಾವಳಿಯನ್ನು ತಪ್ಪಿಸಲು ಪ್ರಾಣಿಗಳ ಶೆಡ್ ಸುತ್ತಲೂ ಸ್ವಚ್ಛವಾಗಿರಲು ಸಲಹೆ ನೀಡಲಾಗುತ್ತದೆ. |

- ರೈತರು **"ದಾಮಿನಿ"** ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು"ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೈತರು ದೂರವಾಣಿ ಮೂಲಕ ಡಾ॥. ಸಿ. ರಾಮಚಂದ್ರ, ಹಿರಿಯ ಕ್ಷೇತ್ರ ಅಧೀಕ್ಷಕರು/ ಡಾ. ಸುಮಂತ್ ಕುಮಾರ್, ಜಿ. ವಿ, ಸಹ ಸಂಶೋಧಕರು, ದೂರವಾಣಿ ಸಂಖ್ಯೆ. 08212591267/ 9535345814 ರವರನ್ನು ಸಂಪರ್ಕಿಸಬಹುದು.

**ಕೃಷಿ ಹವಾಮಾನ ಕ್ಷೇತ್ರ ವಿಭಾಗ,**
**ನಾಗನಹಳ್ಳಿ, ಮೈಸೂರು**